# ಶ್ರೀಮಾತೆ ಶಾರದಾದೇವಿ ಮತ್ತು ಭಿಕ್ಷುಕಿ ಹುಡುಗಿ

ಸಂಗ್ರಹ : ರಾಮೇಗೌಡ

**ಶ್ರೀಮಾತೆ** ಶಾರದಾದೇವಿಯವರು ಬನಾರಸ್‌ನಲ್ಲಿದ್ದಾಗ ಒಂದು ದಿವಸ ಮಧ್ಯಾಹ್ನ ವಿಶ್ರಾಂತಿಯನ್ನು ತೆಗೆದುಕೊಳ್ಳುತ್ತಾ ಮಲಗಿದ್ದರು. ಅವರು ತಂಗಿದ್ದ ಸ್ಥಳದಲ್ಲಿಯೇ ಅವರ ಒಡನಾಡಿಗಳು ಸಹ ಮಲಗಿ ವಿಶ್ರಾಂತಿಯನ್ನು ಪಡೆಯುತ್ತಿದ್ದರು. ಆ ಕುಟೀರದಲ್ಲಿ ಶಾಂತ ವಾತಾವರಣ, ನಿಶ್ಶಬ್ದತೆ ಇತ್ತು. ಮನೆಯ ಹೊರಗೆ ಯಾರೋ ಸುಶ್ರಾವ್ಯವಾಗಿ ಹಾಡುತ್ತಿರುವ ಧ್ವನಿ ಕೇಳಿಬಂತು.

ಆ ಹಾಡಿನಲ್ಲಿ ಮಾಧುರ್ಯವಿತ್ತು, ಕಂಠದಲ್ಲಿ ಇಂಪಿತ್ತು. ಆದರೆ ಧ್ವನಿಯಲ್ಲಿ ದುಃಖ ಹೊರಹೊಮ್ಮುತ್ತಿತ್ತು. ನಿದ್ರೆಯ ಮಂಪರಿನಲ್ಲಿ ಮಲಗಿದ್ದ ಶ್ರೀಮಾತೆಯವರು ಎಚ್ಚೆತ್ತು, "ಮಗು, ಹೊರಗೆ ಹೋಗಿ ನೋಡೋಣ, ಯಾರೋ ಅಳುತ್ತಿರುವಂತಿದೆ" ಎಂದು ಹೇಳಿದರು. ಶ್ರೀಮಾತೆಯವರು ಹೊರಗೆ ಬಂದು ನೋಡಿದರೆ, ಹೃದಯವಿದ್ರಾವಕವಾದ ದೃಶ್ಯ. ಕೃಶವಾದ ದೇಹ, ಕದರಿದ ತಲೆ, ಚಿಂದಿಬಟ್ಟೆಯುಟ್ಟ ಹುಡುಗಿಯೊಬ್ಬಳು ಧಾರಾಕಾರವಾಗಿ ಕಣ್ಣೀರು ಸುರಿಸುತ್ತ ಹಾಡುತ್ತಿದ್ದಾಳೆ. ಶ್ರೀಮಾತೆಯವರು ಆ ದೃಶ್ಯವನ್ನು ನೋಡಿ ಆಶ್ಚರ್ಯದಿಂದ ದಿಙ್ಮೂಢರಾಗಿ ನಿಂತರು. ಹಾಡು ಅಲೆಅಲೆಯಾಗಿ ಹೃದಯದಾಳದಿಂದ ಇಂಪಾಗಿ ಬರುತ್ತಿದೆ. ಕಣ್ಣಿಂದ ದುಃಖಾಶ್ರು ಹೊರಬರುತ್ತಿದೆ. ಶ್ರೀಮಾತೆಯವರು ಅಲ್ಲೇ ಹೊರಗೆ ಕುಳಿತರು. ಶ್ರೀಮಾತೆಯವರ ಹತ್ತಿರ ಬಂದ ಆ ಹುಡುಗಿ ತಲೆಬಾಗಿ ನಮಸ್ಕರಿಸಿ, "ಬಹಳ ದಿವಸಗಳಿಂದ ನನ್ನ ಹೃದಯದಲ್ಲಿ ತುಂಬಿಕೊಂಡಿದ್ದ ಆಸೆಯೊಂದು ಇಂದು ನೆರವೇರಿದೆ. ಇಂದು ನನ್ನ ಆನಂದಕ್ಕೆ ಪಾರವಿಲ್ಲ. ಅದನ್ನು ಮಾತುಗಳಲ್ಲಿ ಹೇಳಲು ಸಾಧ್ಯವಾಗುತ್ತಿಲ್ಲ, ತಾಯಿ" ಎಂದಾಗ ತಮ್ಮ ಎರಡೂ ಕೈಗಳಿಂದ ಆಶೀರ್ವದಿಸುತ್ತಾ ಶ್ರೀಮಾತೆಯವರು ಕೇಳಿದರು, "ನೀನಾರಮ್ಮ? ಎಲ್ಲಿಂದ ಬರುತ್ತಿರುವೆ?"

**ಹುಡುಗಿ** : ನಾನೊಬ್ಬಳು ಅನಾಥ ಭಿಕ್ಷುಕಿ.

**ಶ್ರೀಮಾತೆಯವರು** : ನಿನ್ನ ವಾಸವೆಲ್ಲಿ?

**ಹುಡುಗಿ** : ದಶಾಶ್ವಮೇಧ ಘಾಟಿನಲ್ಲಿರುವ ಬೆಹಾರಿ ಬಾಬಾರ ದೇವಾಲಯದ ಹತ್ತಿರ ಅನ್ನಪೂರ್ಣೆ ಮಂದಿರದ ಬಾಗಿಲಲ್ಲಿ ಇರುತ್ತೇನೆ.

**ಶ್ರೀಮಾತೆಯವರು** : ಸಾಕಷ್ಟು ಭಿಕ್ಷೆ ಸಿಗುತ್ತೆ ತಾನೆ?

**ಹುಡುಗಿ** : ನಿಮ್ಮ ಆಶೀರ್ವಾದದಿಂದ ಎಲ್ಲ ಸರಿಯಾಗಿ ನಡೆದುಕೊಂಡು ಹೋಗುತ್ತಿದೆ. ಆ ಅನ್ನಪೂರ್ಣೇಶ್ವರಿಯು ತನ್ನ ಮಕ್ಕಳಾರನ್ನೂ ಹಸಿವಿಗೆ ಈಡುಮಾಡಿಲ್ಲ. ಆದರೆ, ತಾಯಿ, ನನಗಿರುವ ಒಂದೇ ಚಿಂತೆ ಎಂದರೆ ಭಗವಂತನಲ್ಲಿ ಕಿಂಚಿತ್ ಭಕ್ತಿಯನ್ನು ಪಡೆಯುವುದು ಹೇಗೆ ?

**ಶ್ರೀಮಾತೆಯವರು** : ನಿರಾಶಳಾಗಬೇಡ ಮಗು. ಒಂದು ದಿವಸ ಅದೂ ನಿನಗೆ ದೊರಕೇ ದೊರಕುತ್ತದೆ. ಮಗು, ನೀನು ಇರುವ ಕ್ಷೇತ್ರ ಬಹಳ ಪವಿತ್ರವಾದದ್ದು. ಭಗವಾನ್ ವಿಶ್ವನಾಥ ಮತ್ತು ಜಗನ್ಮಾತೆ ಅನ್ನಪೂರ್ಣೆ ನೆಲೆಸಿರುವ ಈ ಸ್ಥಳದಲ್ಲಿ ನಿನ್ನ ಹೃದಯಾಭಿಲಾಷೆ ಖಂಡಿತ ಸಿದ್ಧಿಸುವುದು. ಈಗ ಮತ್ತೊಂದು ಹಾಡನ್ನು ಹಾಡುವೆಯಾ?

ಆ ಹುಡುಗಿ ಹಾಡಿದಳು.

**ಶ್ರೀಮಾತೆಯವರು** : ಹಾಡು ಬಹಳ ಸೊಗಸಾಗಿದೆ!

**ಹುಡುಗಿ** : ಬಹಳ ದಿವಸಗಳಿಂದ ನಿಮ್ಮನ್ನು ನೋಡಬೇಕೆನ್ನಿಸುತ್ತಿತ್ತು. ನೀವು ಇಲ್ಲಿರುವಿರೆಂದು ತಿಳಿಯಿತು. ನಿಮ್ಮ ಬಳಿಗೆ ಬರುವುದು ಹೇಗೆ? ಇಲ್ಲಿಗೆ ಬಂದರೆ ಯಾರಾದರೂ ಬಾಗಿಲಿನಲ್ಲೇ ತಡೆದು ನಿಲ್ಲಿಸಿ, ಯಾಕೆ, ಏನು ಕಾರಣ, ನಿನ್ನ ಉದ್ದೇಶವೇನು ಎಂದು ಅಡ್ಡಗಟ್ಟಿದರೆ ಏನು ಮಾಡುವುದು ಎಂದು ನಾನು ಹೆದರಿದೆ.

**ಶ್ರೀಮಾತೆಯವರು** : ಯಾರೂ ತಡೆಯುವುದಿಲ್ಲ, ಏನನ್ನೂ ಕೇಳುವುದಿಲ್ಲ, ಯಾವಾಗಲಾದರೂ ನಿನಗಿಷ್ಟ ಬಂದಾಗ ಬರಬಹುದು.

ನಂತರ ಶ್ರೀಮಾತೆಯವರು ತಮ್ಮೊಡನಿದ್ದವರನ್ನು ಕೂಗಿ ಈ ಹುಡುಗಿಗೆ ಪ್ರಸಾದವನ್ನು ಕೊಡಿಸಿದರು. ಹುಡುಗಿ ಪ್ರಸಾದವನ್ನು ಸ್ವೀಕರಿಸಿ ಹೊರಡುವುದರಲ್ಲಿದ್ದಾಗ, ಶ್ರೀಮಾತೆಯವರು "ಮಗು, ಮತ್ತೊಮ್ಮೆ ಬಂದು ಹೋಗು" ಎಂದರು. ಆ ಹುಡುಗಿ ಸ್ವಲ್ಪದೂರ ಹೋದನಂತರ ಶ್ರೀಮಾತೆಯವರು, "ಆಹಾ! ಆ ಹುಡುಗಿಯಲ್ಲಿ ಎಂಥಾ ಭಕ್ತಿ ಇದೆ!" ಎಂದರು.

ಕೆಲವು ದಿವಸಗಳು ಕಳೆದ ನಂತರ ಆ ಬಡ ಹುಡುಗಿ ತಾಯಿಯವರ ಹತ್ತಿರ ಬಂದು ಸಾಷ್ಟಾಂಗ ನಮಸ್ಕಾರ ಮಾಡಿದಳು. ಅವಳ ಕೈಯಲ್ಲಿ ಒಂದು ಅಂಜೂರದ ಹಣ್ಣು ಇತ್ತು. ಪ್ರಣಾಮ ಮಾಡಿ ತನ್ನ ಕೈಯಲ್ಲಿರುವುದನ್ನು ತೋರಿಸುತ್ತ ಆ ಹುಡುಗಿ, "ಈ ದಿನ ಇದು ನನಗೆ ಭಿಕ್ಷೆಯಾಗಿ ಸಿಕ್ಕಿದೆ. ಒಂದು ಮನೆಯಲ್ಲಿ ನನಗೆ ದೊರಕಿದ ಈ ಭಿಕ್ಷೆಯನ್ನು ನಿಮಗಾಗಿ ತಂದಿದ್ದೇನೆ, ಅಮ್ಮಾ. ಆದರೆ ನಿಮಗೆ ಕೊಡಲು ಧೈರ್ಯವಾಗುತ್ತಿಲ್ಲ" ಎಂದು ಹೇಳುತ್ತ ಆ ಹುಡುಗಿ ಸಂಕೋಚದಿಂದ ಮುದುಡಿಹೋದಾಗ, ಶ್ರೀಮಾತೆಯವರು, "ಮಗು, ಬಹಳ ಒಳ್ಳೆಯ ಕೆಲಸವನ್ನೇ ಮಾಡಿರುವೆ" ಎನ್ನುತ್ತಾ ಆ ಹುಡುಗಿಗೆ ಧೈರ್ಯವನ್ನು ತುಂಬಿ,"ಕೊಡಮ್ಮಾ, ಮಗು ನೀನು ತಂದಿರುವುದನ್ನು" ಎಂದರು. ಹುಡುಗಿಯ ಕೈಯಿಂದ ಆ ಅಂಜೂರದ ಹಣ್ಣುಗಳನ್ನು ಸ್ವೀಕರಿಸಿ ಅದನ್ನು ತಮ್ಮ ತಲೆಗೆ

ಸ್ಪರ್ಶಿಸಿ, "ಈ ಭಿಕ್ಷಾನ್ನ ಬಹಳ ಪರಿಶುದ್ಧ. ಇದನ್ನು ಕಂಡರೆ ನಮ್ಮ ಗುರುದೇವರಿಗೆ ಬಹಳ ಪ್ರೀತಿ. ಈ ಹಣ್ಣನ್ನು ನಾನು ಸ್ವೀಕರಿಸುತ್ತೇನೆ" ಎಂದರು. ಶ್ರೀಮಾತೆಯವರ ಮಾತುಗಳನ್ನು ಕೇಳಿ, ಪಾಪ, ಆ ಬಡ ಹುಡುಗಿಗೆ ಏಕಕಾಲದಲ್ಲಿ ಆನಂದಾಶ್ಚರ್ಯಗಳಾದುವು. ಆ ಹುಡುಗಿಗೆ ತನ್ನ ಸ್ವಂತ ತಾಯಿಯೊಡನೆ ಇದ್ದ ಆನಂದಕ್ಕೂ ಮಿಗಿಲಾಗಿತ್ತು. ಆ ಹುಡುಗಿ ಹರ್ಷಭಾವೋದ್ವೇಗದಿಂದ ಶ್ರೀಮಾತೆಯವರಿಗೆ, "ಬಡವಳಾದ ನನ್ನ ಮೇಲೆ ನೀವಿಟ್ಟಿರುವ ಕನಿಕರಕ್ಕೆ ಕೊನೆಯಿಲ್ಲ ಅಮ್ಮಾ" ಎನ್ನುವಾಗ ಅವಳ ಕಣ್ಣುಗಳಿಂದ ಆನಂದಾಶ್ರುಗಳು ಬಿಂದುಬಿಂದುವಾಗಿ ಕೆನ್ನೆಯ ಮೇಲೆ ಧಾರಾಕಾರವಾಗಿ ಹರಿದುವು.

ಶ್ರೀಮಾತೆಯವರು "ನೀನು ಬಹಳ ಇಂಪಾಗಿ ಹಾಡುತ್ತೀಯೆ. ಇಂದೂ ಸಹ ಒಂದು ಹಾಡನ್ನು ಹಾಡುವೆಯಾ?" ಎಂದರು. ಆ ಹುಡುಗಿ ಹಾಡಿದಳು. ಹಾಡನ್ನು ಮುಗಿಸಿ ಆ ಹುಡುಗಿ, "ಅಮ್ಮಾ, ನಾನು ಈ ಹಾಡನ್ನು ಹಾಡಿದರೆ ಸಾಕು, ದಶಾಶ್ವಮೇಧ ಘಾಟಿನಲ್ಲಿ ವಾಸಿಸುವ ಬೆಹಾರಿ ಬಾಬಾ ಸಾಧು ಗೋಪಾಲನೃತ್ಯಕ್ಕೆ ಪ್ರಾರಂಭಿಸುತ್ತಾರೆ. ಅವರು ನೃತ್ಯ ಮಾಡುತ್ತಿದ್ದರೆ ಆ ಬಾಲಗೋಪಾಲನ ಹಾಗೇ ಕಾಣಿಸುತ್ತಾರೆ" ಎಂದಳು. ಶ್ರೀಮಾತೆಯವರಿಗೆ ಆ ಭಿಕ್ಷುಕಿ ಹುಡುಗಿಯ ಹಾಡನ್ನು ಎಷ್ಟು ಕೇಳಿದರೂ ಮತ್ತೂ ಕೇಳಬೇಕೆನಿಸುತ್ತಿತ್ತು. ಆ ಹುಡುಗಿಯನ್ನು ಮನಃಪೂರ್ವಕವಾಗಿ ಹರಸಿ, ಅವಳಿಗೆ ಪ್ರಸಾದವನ್ನು ಕೊಟ್ಟರು. ಆ ಭಿಕ್ಷಾರ್ಥಿಗೆ ಸಮಯ ಕಳೆದದ್ದೇ ಗೊತ್ತಾಗಲಿಲ್ಲ. ತಾಯಿಯೊಡನೆ ಮಕ್ಕಳು ಕಳೆಯುವ ಕೆಲವೇ ಕ್ಷಣಗಳಂತೆ ಸಮಯ ಹೋಯಿತು. ಪ್ರಸಾದವನ್ನು ತೆಗೆದುಕೊಂಡು "ಅಮ್ಮಾ, ಈ ದಿವಸಕ್ಕೆ ಇಷ್ಟು ಸಾಕು. ನಾನಿನ್ನು ಹೋಗಿ ಬರುತ್ತೇನೆ" ಎಂದು ಹೇಳಿ ಸರಸರನೆ ಹೆಜ್ಜೆ ಹಾಕಿದಳು.

ಶ್ರೀಮಾತೆಯವರ ಕಿವಿಯಲ್ಲಿ ಆ ಹುಡುಗಿಯ ಹಾಡಿನ ಧ್ವನಿ ಪ್ರತಿಧ್ವನಿತವಾಗುತ್ತಿತ್ತು. ಏಕೋ ಏನೋ ಆ ಹುಡುಗಿ ಅವರ ಸ್ಮೃತಿಯಲ್ಲಿ ನೆಲೆನಿಂತಳು. ಶ್ರೀಮಾತೆಯವರು ವಾರಾಣಸಿಯಲ್ಲಿದ್ದಷ್ಟು ದಿವಸವೂ ಆ ಹುಡುಗಿಗೆ, "ನಿನಗೆ ಸಮಯ ಸಿಕ್ಕಾಗ, ಯಾವಾಗಲಾದರೂ ಸರಿಯೇ ನನ್ನಲ್ಲಿಗೆ ಬರುತ್ತಿರು" ಎಂದು ಅತ್ಯಂತ ಪ್ರೀತಿ ವಾತ್ಸಲ್ಯದಿಂದ ಹೇಳುತ್ತಿದ್ದರು. ◆

## ಶ್ರೀಮಾತೆಯವರು ಧ್ರುವ ಚರಿತ್ರೆಯನ್ನು ಕೇಳಿದಾಗ...

ಸಂಗ್ರಹ : ಎನ್. ಗೋಪೀನಾಥ

ಭಕ್ತನೊಬ್ಬನು ಶ್ರೀಮಾತೆಯವರಿಗೆ ತಾನು ಬರೆದಿದ್ದ ಪುಸ್ತಕ ಧ್ರುವಚರಿತ್ರೆಯನ್ನು ಕಳಿಸಿದ್ದನು. ಇದರಿಂದ ಶ್ರೀಮಾತೆಯವರು ತುಂಬಾ ಸಂತೋಷಗೊಂಡು, ಅದನ್ನು ಓದಿಸಿ ಕೇಳಲು ಕಾತರರಾದರು. ಅದರಂತೆ, ಒಂದು ಸಂಜೆ ಜಯರಾಂಬಾಟಿಯಲ್ಲಿನ ಅವರ ಮನೆಯ ವರಾಂಡದಲ್ಲಿ ಒಂದು ಚಾಪೆಯ ಮೇಲೆ ಶ್ರೀಮಾತೆಯವರು ಇನ್ನಿತರ ಮಹಿಳಾ ಸಂಗಾತಿಯರೊಂದಿಗೆ ಓದು ಕೇಳಲು ಕುಳಿತರು. ಭಕ್ತನೊಬ್ಬ ಸ್ವಲ್ಪ ದೂರದಲ್ಲಿ ಕುಳಿತು ಓದಲಾರಂಭಿಸಿದ. ಓದು ಮುಂದುವರಿದಂತೆ ಎಲ್ಲರೂ ಸಂತೋಷಗೊಂಡರು.

ರಾಜನಾದ ಉತ್ತಾನಪಾದ ಸಿಂಹಾಸನದ ಮೇಲೆ ಕುಳಿತಿದ್ದನು. ಕಿರಿಯ ಹಾಗೂ ನೆಚ್ಚಿನ ಹೆಂಡತಿಯಾದ ಸುರುಚಿಯ ಮಗನಾದ ಉತ್ತಮ ತಂದೆಯ ತೊಡೆಯಮೇಲೆ ಕುಳಿತು ಆಟವಾಡುತ್ತಿದ್ದನು. ಇದನ್ನು ನೋಡಿದ, ಹಿರಿಯ ಹೆಂಡತಿಯ ಮಗ ಧ್ರುವ ತಾನೂ ತಂದೆಯ ತೊಡೆಯೇರಲು ಹೋದನು. ಕುಪಿತಳಾದ ಸುರುಚಿ ಅವನನ್ನು ತಡೆಯುತ್ತಾ, ಗದರಿಸಿದಳು: "ಎಲವೋ ಬಾಲಕ! ನಿನಗೆಷ್ಟು ಧೈರ್ಯ! ನಿನ್ನ ತಂದೆಯ ತೊಡೆಯನ್ನೇರಬೇಕಾದರೆ ಮತ್ತೆ ನೀನು ನನ್ನ ಹೊಟ್ಟೆಯಲ್ಲಿ ಹುಟ್ಟಿಬರಬೇಕು!" ಸುರುಚಿಯ ಮಾತನ್ನು ಕೇಳಿಸಿಕೊಂಡರೂ ಪತ್ನೀದಾಸನಾದ ರಾಜ ಅವಳ ಭಯದಿಂದಾಗಿ ಧ್ರುವನತ್ತ ಗಮನ ಹರಿಸಲೇ ಇಲ್ಲ. ಘಾಸಿಗೊಂಡ ಬಾಲಕ ಅಳಲಾರಂಭಿಸಿದ. ಇದನ್ನು ಕೇಳಿದ ಶ್ರೀಮಾತೆಯವರೂ ಕಣ್ಣೀರು ಸುರಿಸಲಾರಂಭಿಸಿದರು. ಓದು ನಿಂತಿತು. ಅವರು ಸ್ವಲ್ಪ ಸಮಾಧಾನ ಹೊಂದಿ ಕಣ್ಣೊರಸಿಕೊಂಡನಂತರ, ಓದು ಮುಂದುವರಿಯಿತು. ನಂತರ ಇನ್ನೊಂದು ಪ್ರಸಂಗ ಬಂದಿತು.

ಐದು ವರ್ಷದ ಬಾಲಕ ಧ್ರುವ, ಕಾಡಿಗೆ ಹೋಗಿ ಭಗವಂತನಾದ ಶ್ರೀಹರಿಯನ್ನು ಕುರಿತು ತಪಸ್ಸನ್ನಾಚರಿಸಲು ನಿರ್ಧರಿಸಿದ. ಸುನೀತಿಗೆ, ಅವಳ ನೊಂದ ಬಾಳಿನಲ್ಲಿ, ಧ್ರುವನೊಬ್ಬನೇ ಬೆಳಕಾಗಿದ್ದ. ಆತ ಈಗ ಕಾಡಿಗೆ ಹೊರಟಿದ್ದಾನೆ, ಅದೂ ಏಕಾಂಗಿಯಾಗಿ! ಬೇಡವೆಂದು ನಾನಾ ಪರಿ ಹೇಳಿದಳು; ಆದರೆ ಧ್ರುವ ಅಚಲನಾಗಿದ್ದ. ಸುನೀತಿಯ ಕಷ್ಟ ಕಂಡು ಶ್ರೀಮಾತೆಯವರು ತಾವೇ ಸುನೀತಿಯೆಂದು ಭಾವಿಸಿ, ದುಃಖಿಸಿದರು, ಮತ್ತೆ ಕಣ್ಣೀರು ಧಾರೆಧಾರೆಯಾಗಿ ಹರಿಯಿತು. ಮೂಕರಾದ ಓದುಗ ಮತ್ತು ಇತರರು ಎವೆಮುಚ್ಚದ ಕಣ್ಣುಗಳಿಂದ ಅವರನ್ನೇ ನೋಡುತ್ತಾ ಕುಳಿತರು. ಸ್ವಲ್ಪ ಕಾದನಂತರ, ಶ್ರೀಮಾತೆಯವರು ಸಮಾಧಾನಗೊಂಡಾಗ, ಓದು ಮುಂದುವರಿಯಿತು.

ಧ್ರುವ ಒಂಟಿಯಾಗಿ ಕಾಡಿನಲ್ಲಿ ಪಯಣ ಬೆಳೆಸಿದ. ಆ ಕಗ್ಗಾಡಿನ ಮಾರ್ಗದಲ್ಲಿ ಶ್ರೀಭಗವಂತನ ಕೃಪೆಯಿಂದ, ಧ್ರುವನ ದಾರಿ ಸುಗಮವಾಯಿತು. ಈಗ ಶ್ರೀಮಾತೆಯವರಿಗೆ ಹೃದಯತುಂಬಿ ಬಂದು ತುಟಿಗಳ ಮೇಲೆ ಕಿರುನಗೆ ಮೂಡಿತು. ನಂತರ ದೇವರ್ಷಿ ನಾರದರು ಬಂದು ಧ್ರುವನಿಗೆ ಉಪದೇಶ ಕೊಟ್ಟಾಗ, ಶ್ರೀಮಾತೆಯವರು ಇನ್ನೂ ಸಂತಸ ಹೊಂದಿ ಆನಂದದಿಂದ ಹೇಳಿದರು: "ನೋಡಿ, ಭಗವಂತ ತನ್ನನ್ನು ನಂಬಿದವರಿಗೆ ಹೇಗೆ ಸಹಾಯ ಮಾಡುತ್ತಾನೆ! ಅವರ ಮೇಲೆ ಹೇಗೆ ಕೃಪೆಗರೆಯುತ್ತಾನೆ !" ಈಗ ಧ್ರುವನ ಕಠಿಣ ತಪಸ್ಸಿನ ವರ್ಣನೆ : ಕ್ರೂರ ಮೃಗಗಳಿಂದ ಕೂಡಿದ ಆ ಕಾಡಿನಲ್ಲಿ ಅವನಿಗಾದ ಭೀತಿಕಾರಕ ಅನುಭವ, ಚಿಕ್ಕ ಬಾಲಕನಾದ ಅವನು ಎದೆಗುಂದಿ ಅಸಹಾಯಕನಾಗಿ ಅಳತೊಡಗಿದ. ಧ್ರುವ ತಮ್ಮ ಮಗನೆಂದು ಭಾವಿಸಿ ಶ್ರೀಮಾತೆಯವರು ಪುನಃ ಕಂಬನಿಗರೆದರು. ಶ್ರೀಮಾತೆಯವರು ಸಮಾಧಾನ ಹೊಂದಲು ಬಹಳ ಕಾಲವೇ ಬೇಕಾಯಿತು.

ಓದು ಮುಂದುವರೆಯಿತು. ಆದರೆ, ಶ್ರೀಮಾತೆಯವರ ಕಣ್ಮುಂದೆ ಧ್ರುವನ ಚಿತ್ರವೇ ಬಂದು, ಪುನಃ ಅಳತೊಡಗಿದರು. ಅದು ಇನ್ನೂ ಜಾಸ್ತಿಯಾಗಿ, ಅವರ ಆತ್ಮ ಮತ್ತು ಹೃದಯಗಳು ಧ್ರುವನನ್ನು ರಕ್ಷಿಸಲು ಆ ನಡುರಾತ್ರಿಯಲ್ಲಿ ಕಾಡಿಗೆ ಓಡಿದವೋ ಎನ್ನಿಸಿತು. ಅಲ್ಲಿದ್ದವರೆಲ್ಲರೂ, ದುಃಖ ಸೂಚಿಸುವ ಈ ಅನನ್ಯ ರೀತಿಯನ್ನು ಕಂಡು ಮಾತಿಲ್ಲದವರಾದರು. ಸ್ವಲ್ಪ ಹೊತ್ತಿನ ನಂತರ ಎಲ್ಲರೂ ಅಲ್ಲಿಂದ ಸದ್ದಿಲ್ಲದೆ ಹೊರಟರು. ಓದನ್ನು ನಿಲ್ಲಿಸಬೇಕಾಯಿತು. ಎಲ್ಲರ ಹೃದಯದಲ್ಲೂ ಅದೇ ದುಃಖ. ಯಾರಿಗಾಗಿ? ಯಾರು ಹೇಳಬಲ್ಲರು?

(ಆಧಾರ :The Mother As I Saw Her, by Swami Saradeshananda)